**ದಿನಾಂಕಃ 18-01-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು 10 ನೇ ತರಗತಿಯವರೆಗೆ ಅಭ್ಯಾಸ ಮಾಡಿದ್ದೇನೆ. ಇದೇ ನ್ಯಾಯಾಲಯದಲ್ಲಿ ನನ್ನ ಪತ್ನಿ ನನ್ನ ಮೇಲೆ ಒಂದು ಎಂಸಿ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ನ್ಯಾಯಾಲಯದ ನಡುವಳಿಕೆಗಳ ಬಗ್ಗೆ ನನಗೆ ಅಲ್ಪಸ್ವಲ್ಪ ಮಾಹಿತಿ ಇದೆ ಎಂದರೆ ಸರಿ. ತಾಲ್ಲೂಕು ಆಫೀಸ್‌ನಲ್ಲಿ ಸಿಗಬಹುದಾದ ದಾಖಲೆಗಳ ಬಗ್ಗೆ ಕೂಡಾ ನನಗೆ ವಿಶೇಷ ಮಾಹಿತಿ ಇದೆ ಎಂದರೆ ಸರಿಯಲ್ಲ. ನಮ್ಮ ಗ್ರಾಮಸ್ಥರು ನನಗೆ ತಿಳುವಳಿಕೆ ಇರುವ ಕಾರಣ ನನ್ನ ಕಡೆಯಿಂದ ದಾಖಲೆಗಳನ್ನು ತೆಗೆಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ತಂದೂರು ಗ್ರಾಮದಲ್ಲಿ ನನಗೆ ಸ್ವಂತಕ್ಕೆ ಮನೆ ಮತ್ತು ಜಮೀನುಗಳು ಇಲ್ಲ ಎಂದರೆ ಸಾಕ್ಷಿಯು ತಂದೆಗೆ ಸೇರಿದ ಆಸ್ತಿಗಳು ಇವೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪ್ರಶ್ನೆಗಳಿಗೆ ಅಸಮಂಜಸ ಉತ್ತರಗಳನ್ನು ಕೊಡುತ್ತಾ ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡುತ್ತಿರುವ ಕಾರಣ ಸೂಕ್ತ ಸಲಹೆ ಕೊಡುವಂತೆ ವಕೀಲರಿಗೆ ಮಾಹಿತಿ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***